**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ**

ಸಿ.ಸಿ.ನಂಃ 8176/2023 ಸಿ.ಡಬ್ಲ್ಯೂ –05 ಪಿ.ಡಬ್ಲ್ಯೂ -07

| | | |
|---|---|---|
| ಹೆಸರು | ಃ | ಶಿವಾನಂದ |
| ತಂದೆ | ಃ | ಹಿರಗಪ್ಪಾ |
| ವಯಸ್ಸು | ಃ | ೪೩ ವರ್ಷ |
| ಉದ್ಯೋಗ | : | ಸಹಾಯಕ ನಿರ್ದೇಶಕರು ರೇಷ್ಮ ಇಲಾಖೆ |
| ವಾಸಸ್ಥಳ | ಃ | ಬೆಂಗಳೂರು |

ದಿನಾಂಕಃ 24.07.2025

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ ಅವರಿಂದಃ-**

2013 ರಿಂದ ದಿಃ 26-01-2025 ವರೆಗೆ ನಾನು ಇನಚಾರ್ಜ ಸೆಕ್ಯೂರಿಟಿ ಆಫೀಸರ್ ಸಿ.ಯು.ಕೆ. ಕಡಗಂಚಿಯಲ್ಲಿ ಕಾರ್ಯನಿರ್ವಹಿಸಿದ್ದೇನೆ. ಆರೋಪಿಯ ಪರಿಚಯ ಇರುತ್ತದೆ. ಚಾಸಾ-1 ರಿಂದ 4 ರವರ ಪರಿಚಯ ಇರುತ್ತದೆ. ಸಿ.ಯು.ಕೆ. ಆಳವಿನ ಅಂಚಿನಲ್ಲಿ ಇರುವ ಭಾಷೆಯ ಅಧ್ಯಯನ ಕೇಂದ್ರದಲ್ಲಿ 3 ಗಣಕಯಂತ್ರಗಳು ಕಳುವು ಆದ ಬಗ್ಗೆ ಚಾಸಾ 4 ರವರು ಕರೆ ಮಾಡಿ ತಿಳಿಸಿರುತ್ತಾರೆ. ನಾನು ಸ್ಥಳಕ್ಕೆ ಹೋದ ಮೇಲೆ ಪೋಲಿಸರಿಗೆ ಕರೆ ಮಾಡಿದಾಗ ಪಿ.ಎಸ್.ಐ ರವರು ಬಂದು ವಿಚಾರಣೆ ಮಾಡಿದಾಗ ನಾವು ಹಿಂದಿನ ದಿನ ಆರೋಪಿಯ ಘಟನಾ ಸ್ಥಳದಲ್ಲಿ ಅಡಾಡುತ್ತಿದ್ದ ಬಗ್ಗೆ ನೋಡಿದ್ದನು ತಿಳಿಸಿರುತ್ತೇವೆ. ನಂತರ ಪಿ.ಎಸ್.ಐ ರವರು ಆರೋಪಿಯ ಮುಬೈಲ ನಂಬರ ತೆಗೆದುಕೊಂಡು ಅವನು ಇದ್ದ ಕೊಣೆಗೆ ಹೋಗಿ ನೋಡಿದಾಗ ಅಲ್ಲಿ ಕಳುವು ಆದ ಗಣಕಯಂತ್ರಗಳು ಮತ್ತು ಆರೋಪಿ ಸಿಕ್ಕಿರುತ್ತಾರೆ. ನಂತರ ಆರೋಪಿ ಹಾಗೂ ಮು.ಮಾಲನ್ನು ತೆಗೆದುಕೊಂಡು ಪೋಲಿಸ್ ಠಾಣೆಗೆ ಹೋಗಿರುತ್ತಾರೆ. ನಂತರ ಅದೇ ದಿನ ಮಧ್ಯಾಹ್ನ 12.00 ಗಂಟೆಗೆ ಸ್ಥಳ ಮಹಾಜರ ಮಾಡಿರುತ್ತಾರೆ. ಅಲ್ಲಿ ಬೆರಳಚ್ಚು ತಜ್ಞರು ಬಂದು ತಪಾಸಣೆ ಮಾಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿನಾಂಕಃ 02-08-2023 ರಂದು ಘಟನೆ ಆಗಿರುತ್ತದೆ ಎಂದರೆ ಸರಿ. ಮೂರು ಸಿ.ಪಿ.ಯು ಮತ್ತು ಎರಡು ಮಾನಿಟರಗಳು ಕಳುವು ಆಗಿರುತ್ತವೆ ಎಂದರೆ ಸರಿ. ನಾನು ಪೋಲಿಸರ ಮುಂದೆ ಹೇಳಿ ಕೆ

ಮತ್ತು ಪುರವಣಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಈಗಾಗಲೇ ಗುರುತಿಸಲಾದ ಮು. ಮಾ 1 ರಿಂದ 5 ನ್ನು ಗುರುತಿಸುತ್ತಾರೆ.

**<u>ಪಾಟೀ ಸವಾಲು ಆರೋಪಿ ಪರ ಶ್ರೀ. ಎಸ್ ಎ ಕೆ ವಕೀಲರಿಂದಃ</u>**

ನನ್ನ ಕೆಲಸ ವಿಶ್ವವಿದ್ಯಾಲಯದ ರೆಕಾರ್ಡ ರೂಮಿನಲ್ಲಿ 24*7 ಇರುತ್ತದೆ. ನಾನು ಸೆಕ್ಯೂರಿಟಿ ಇನಚಾರ್ಜ ಅಂತಾ ಕೆಲಸ ಮಾಡಿದ ಕಾರಣ ನನಗೆ ವಿಶ್ವವಿದ್ಯಾಲಯದ ಯಾವ ಯಾವ ಭಾಗದಲ್ಲಿ ಸಿ.ಸಿ.ಟಿವಿ ಕ್ಯಾಮೆರಾ ಮತ್ತು ಸೆಕ್ಯೂರಿಟಿ ಅವರು ಕೆಲಸ ಮಾಡುತ್ತಾರೆ ಅಂತಾ ಗೊತ್ತು ಅಂದರೆ ಸರಿ. ವಿಶ್ವವಿದ್ಯಾಲಯದ ಎಲ್ಲಾ ಒಳಗೆ ಮತ್ತು ಹೊರಗೆ ಹೊಗುವ ಗೇಟಗಳಲ್ಲಿ ಸೆಕ್ಯೂರಿಟಿ ಗಾರ್ಡಗಳು ಕೆಲಸ ಮಾಡುತ್ತಾರೆ ಎಂದರೆ ಸರಿ. ವಿಶ್ವವಿದ್ಯಾಲಯದ ಒಳಗಡೆ ಯಾವುದಾರು ವಾಹನ ಹೋದರೆ ಅದರ ಮಾಹಿತಿಯನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ವಿಶ್ವವಿದ್ಯಾಲಯದ ಎಲ್ಲಾ ಡಿಪಾರ್ಟಮೆಂಟಗಳಲ್ಲಿ ಸಿ.ಸಿ.ಟಿವಿ ಕ್ಯಾಮೆರಾ ಇತ್ತು ಎಂದರೆ ಸಾಕ್ಷಿಯು ಆ ಸಮಯದಲ್ಲಿ ಕೇವಲ ಅಡಮಿನಿಸ್ಟ್ರೇಷನ ಕಟ್ಟಡ ಹಾಸ್ಟೇಲ್ ಮತ್ತು ಎಲ್ಲಾ ಸರ್ಕಲಗಳಲ್ಲಿ ಮಾತ್ರ ಇತ್ತು ಎಂದು ನುಡಿಯುತ್ತಾರೆ.

ನಾನು ಘಟನೆಯನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಆದಕಾರಣ ನನಗೆ ಘಟನೆಯು ನಿರ್ಧಿಷ್ಟವಾಗಿ ಯಾವ ಸಮಯದಲ್ಲಿ ಆಗಿತ್ತು ಅಂತಾ ಹೇಳಲು ಬರುವುದಿಲ್ಲ ಎಂದರೆ ಸರಿ. ನಾನು ಯಾವುದಾದರು ಸಿ.ಸಿ.ಟಿವಿಯಲ್ಲಿ ಮತ್ತು ಸೆಕ್ಯೂರಿಟಿ ಗಾರ್ಡಗಳನ್ನು ವಿಚಾರಣೆ ಮಾಡಿದಾಗ ಆರೋಪಿಯೇ ಕಳತನ ಮಾಡಿದ್ದಾನೆ ಅಂತಾ ತಿಳಿದು ಬಂದಿರುವುದಿಲ್ಲ. ನಾನು ಸೆಕ್ಯೂರಿಟಿ ಇಚಾರ್ಜ ಅಂತಾ ಕೆಲಸ ಮಾಡಿದ ಕಾರಣ ಸೆಕ್ಯೂರಿಟಿಗೆ ಸಂಬಂಧಿಸಿದ ಯಾವುದಾದರು ಘಟನೆ ಮತ್ತು ಪ್ರಕರಣ ನಡೆದಾಗ ಅದರ ಮಾಹಿತಿ ತಿಳಿಯುತ್ತಿತ್ತು ಎಂದರೆ ಸರಿ. ಆರೋಪಿಯು ವಿಶ್ವವಿದ್ಯಾಲಯದಲ್ಲಿ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ ಬಗ್ಗೆ ನನಗೆ ಮಾಹಿತಿ ಇತ್ತು. ಆರೋಪಿಯು ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಯಾಗಿದ್ದಾಗ ರಾತ್ರಿ 8.30 ರ ನಂತರ ಹೊರಗೆ ಹೋಗಿ ಮದ್ಯಪಾನ ಮಾಡಿ ಮತ್ತು ಮದ್ಯವನ್ನು ವಿಶ್ವವಿದ್ಯಾಲಯಕ್ಕೆ ತರುತಿದ್ದ ಕಾರಣ ಅವನನ್ನು ವಿಶ್ವವಿದ್ಯಾಲಯದಿಂದ ತೆಗೆದು ಹಾಕಿದ ಬಗ್ಗೆ ನನಗೆ ಮಾಹಿತಿ ಇತ್ತು. ವಿಶ್ವವಿದ್ಯಾಲಯದಿಂದ ಆರೋಪಿಯನ್ನು ತೆಗೆದು ಹಾಕುವ ಸಮಯದಲ್ಲಿ ಆರೋಪಿಯ ನನ್ನನ್ನು ವಿನಃ ಕಾರಣ ವಿಶ್ವವಿದ್ಯಾಲಯದಿಂದ ತೆಗೆದು ಹಾಕುತ್ತಿದ್ದಿರಿ ಅಂತಾ ರೆಜಿಸ್ಟರ ಮತ್ತು ಎಚ್.ಓ.ಡಿ ಅವರೊಂದಿಗೆ ಬಾಯಿ ಮಾತಿನಿಂದ ತಕರಾರು ಮಾಡಿಕೊಂಡ ಬಗ್ಗೆ ನನಗೆ ಗೊತ್ತು. ಸದರಿ ತಕರಾರು ಆಗಿದ ಕಾರಣ ರೆಜಿಸ್ಟರ ಮತ್ತು ಎಚ್.ಓ.ಡಿ ಯನ್ನು ಆರೋಪಿಯನ್ನು ವಿಶ್ವವಿದ್ಯಾಲಯದಿಂದ ತೆಗೆದು ಹಾಕಿರುತ್ತಾರೆ ಎಂದರೆ ಸರಿ. ವಿಶ್ವವಿದ್ಯಾಲಯದ ಕ್ಯಾಂಪಸನಲ್ಲಿ ಮದ್ಯ ನಿಷೇದ ಇರುತ್ತದೆ. ನಾನು ಆರೋಪಿಯು

ವಿಶ್ವವಿದ್ಯಾಲಯದ ಕ್ಯಾಂಪಸನಲ್ಲ ಮದ್ಯ ನೀಷೆದ ಇದ್ದರೂ ಸಹ ಮದ್ಯವನ್ನು ತೆಗೆದುಕೊಂಡು ಬರುತ್ತಿದ್ದ ಬಗ್ಗೆ ಪೋಲಿಸರಿಗೆ ದೂರನ್ನು ನೀಡಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿಯು ಮದ್ಯ ಸೇವನೆ ಮಾಡಿ ಮದ್ಯವನ್ನು ವಿಶ್ವವಿದ್ಯಾಲಯಕ್ಕೆ ತರುತಿದಿದ್ದನು ಸತಃ ನೋಡಿರುತ್ತೇನೆ. ಅಳುವಿನ ಅಂಚಿನಲ್ಲಿ ಇರುವ ಭಾಷೆಯ ಅಧ್ಯಯನ ಕೇಂದ್ರದಲ್ಲಿ ವಾಚ್‌ಮೇನ ಅಥವಾ ಸೆಕ್ಯೂರಿಟಿ ಗಾರ್ಡಗಳು ಇರಲಿಲ್ಲ. ಸದರಿ ಅಧ್ಯಯನ ಕೇಂದ್ರದಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಅಲ್ಲಿ ಹೋಗಿ ಬರುವ ಅವಕಾಶ ಇತ್ತು ಎಂದರೆ ಸರಿ. ಸದರಿ ಅಧ್ಯಯನ ಕೇಂದ್ರವು ವಿಶ್ವವಿದ್ಯಾಲಯದ ಮುಖ್ಯದ್ವಾರದಿಂದ ಸುಮಾರು 600 ಮೀಟರ ಅಂತರದಲ್ಲಿ ಇರುತ್ತದೆ. ಸದರಿ ಅಧ್ಯಯನ ಕೇಂದ್ರಕ್ಕೆ ಹೋಗಿ ಬರಲು ರಸ್ತೆ ಇರುತ್ತದೆ ಎಂದರೆ ಸರಿ. ಮುಖ್ಯದ್ವಾರದಿಂದ ಅಧ್ಯಯನ ಕೇಂದ್ರಕ್ಕೆ ಹೊಗುವ ರಸ್ತೆಯಲ್ಲಿ ಸಿ.ಸಿ.ಟಿವಿ ಕ್ಯಾಮೆರಾಗಳು ಇದ್ದೆಯಾ ಎಂದರೆ ಸಾಕ್ಷಿಯು ಅರ್ಧ ದಾರಿಯವರೆಗು ಇದ್ದು ಮುಂದೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಮೂರು ಸಿ.ಪಿ.ಯು ಗಳನ್ನು ಮತ್ತು ಎರಡು ಮಾನಿಟರಗಳನ್ನು ಒಬ್ಬ ವ್ಯಕ್ತಿ ಒಂದೇ ಸಮಯಕ್ಕೆ ತೆಗೆದುಕೊಂಡು ಹೋಗಲು ಬರುವುದಿಲ್ಲ ಎಂದರೆ ಸರಿ. ಸದರಿ ವಸ್ತುಗಳನ್ನು ಒಬ್ಬ ವ್ಯಕ್ತಿ ಯಾವುದಾರರು ವಾಹನದ ಮೇಲೆ ತೆಗೆದುಕೊಂಡಿರುತ್ತಾರೆ ಅಂತಾ ನಮಗೆ ಕಂಡು ಬಂದಿರುವುದಿಲ್ಲ, ಸಾಕ್ಷಿಯು ಮುಂದುವರೆದು ಸದರಿ ಅಧ್ಯಯನ ಕೇಂದ್ರದ ಒಂದು ಕರ್ಟನಲ್ಲಿ ತೆಗೆದುಕೊಂಡು ಹೋಗಿರುತ್ತಾರೆ ಅಂತಾ ಕಂಡು ಬಂದಿರುತ್ತದೆ ಎಂದು ನುಡಿಯುುತ್ತಾರೆ. ನನಗೆ ಘಟನೆ ಆದ ಬಗ್ಗೆ ಚಾಸಾ 4 ರವರು ಸೋಮಾವಾರ ಬೆಳಿಗ್ಗೆ 10.00 ಗಂಟೆಗೆ ಕರೆ ಮಾಡಿ ತಿಳಿಸಿರುತ್ತಾರೆ. ಆರೋಪಿಯು ಎಲ್ಲಿ ಇದ್ದ ಅಂತಾ ನನಗೆ ಮಾಹಿತಿ ಇಲ್ಲ. ಆರೋಪಿಯು ಬಾಡಿಗೆ ಮನೆಯಲ್ಲಿ ಇದ್ದ ಅಂತಾ ನನಗೆ ಗೊತ್ತು. ಆರೋಪಿಯ ಜೊತೆಗೆ ಮೂರು ಜನ ಇರುತ್ತಿದ್ದರು ಅಂತಾ ನನಗೆ ಗೊತ್ತು ಆದರೆ ಅವರ ಹೆಸರು ಗೊತ್ತಿಲ್ಲ. ಆರೋಪಿಯು ಇದ್ದ ಬಾಡಿಗೆ ಮನೆಯ ಮಾಲೀಕರು ಯಾರು ಅಂತಾ ನನಗೆ ಗೊತ್ತಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದೆ ಮೊದಲನೆ ಬಾರಿಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಚಾಸಾ 4 ರವರು ನನ್ನ ಹಿರಿಯ ಅಧಿಕಾರಿಗಳು ಎಂದರೆ ಸರಿ. ನಾನು ಚಾಸಾ 4 ರವರು ಹೇಳಿದಂತೆ ಇವತ್ತು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಆರೋಪಿಯನ್ನು ವಿಶ್ವವಿದ್ಯಾಲಯದಿಂದ ತೆಗೆದು ಹಾಕಿದ ಕಾರಣ ಅವನು ತಕರಾರು ಮಾಡಿಕೊಂಡ ವಿಷಯವಾಗಿ ಚಾಸಾ 1 ರವರು ಆರೋಪಿಯ ವಿರುದ್ದ ಸುಳ್ಳು ದೂರನ್ನು ನೀಡಿದ್ದು ಅವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

2013 ರಿಂದ ದಿಃ 26-01-2025 ವರೆಗೆ ನಾನು ಇನಚಾರ್ಜ ಸೆಕ್ಯೂರಿಟಿ ಆಫೀಸರ್ ಸಿ.ಯು.ಕೆ. ಕಡಗಂಚಿಯಲ್ಲಿ ಕಾರ್ಯನಿರ್ವಹಿಸಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

ಆರೋಪಿಯ ಪರಿಚಯ ಇರುತ್ತದೆ. ಚಾಸಾ-1 ರಿಂದ 4 ರವರ ಪರಿಚಯ ಇರುತ್ತದೆ. ಸಿ.ಯು.ಕೆ. ಅಳವಿನ ಅಂಚಿನಲ್ಲಿ ಇರುವ ಭಾಷೆಯ ಅಧ್ಯಯನ ಕೇಂದ್ರದಲ್ಲಿ 3 ಗಣಕಯಂತ್ರಗಳು ಕಳುವು ಆದ ಬಗ್ಗೆ ಚಾಸಾ 4 ರವರು ಕರೆ ಮಾಡಿ ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋದ ಮೇಲೆ ಪೋಲಿಸರಿಗೆ ಕರೆ ಮಾಡಿದಾಗ ಪಿ.ಎಸ್.ಐ ರವರು ಬಂದು ವಿಚಾರಣೆ ಮಾಡಿದಾಗ ನಾವು ಹಿಂದಿನ ದಿನ ಆರೋಪಿಯ ಘಟನಾ ಸ್ಥಳದಲ್ಲಿ ಅಡಾಡುತ್ತಿದ್ದ ಬಗ್ಗೆ ನೋಡಿದ್ದನು ತಿಳಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ನಂತರ ಪಿ.ಎಸ್.ಐ ರವರು ಆರೋಪಿಯ ಮುಬೈಲ ನಂಬರ ತೆಗೆದುಕೊಂಡು ಅವನು ಇದ್ದ ಕೊಣೆಗೆ ಹೋಗಿ ನೋಡಿದಾಗ ಅಲ್ಲಿ ಕಳುವು ಆದ ಗಣಕಯಂತ್ರಗಳು ಮತ್ತು ಆರೋಪಿ ಸಿಕ್ಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ನಂತರ ಆರೋಪಿ ಹಾಗೂ ಮು.ಮಾಲನ್ನು ತೆಗೆದುಕೊಂಡು ಪೋಲಿಸ್ ಠಾಣೆಗೆ ಹೋಗಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ನಂತರ ಅದೇ ದಿನ ಮಧ್ಯಾಹ್ನ 12.00 ಗಂಟೆಗೆ ಸ್ಥಳ ಮಹಾಜರ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಅಲ್ಲಿ ಬೆರಳಚ್ಚು ತಜ್ಞರು ಬಂದು ತಪಾಸಣೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ- ಇರುವುದಿಲ್ಲ.**

ಓ.ಹೇ.ಕೇ.ಸರಿ ಇದೆ.

ಸಿ.ಸಿ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಮ.ಎಫ್.ಸಿ ಆಳಂದ